ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ

ನ್ಯಾಯಾಲಯದಲ್ಲಿ, ಮುಳಬಾಗಿಲು

ಸಿ.ಸಿ. ಸಂಖ್ಯೆಃ 62/2016

ಸಿ.ಡಬ್ಲೂ: 1 /ಪಿ.ಡಬ್ಲೂಃ 4

ಪ್ರಮಾಣೀಕರಿಸಿದ ದಿನಾಂಕಃ 29.06.2026

ಮುಂದುವರೆದ ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿ ಪರ ಶ್ರೀಮತಿ. ಎನ್ ಪಿ ವಕೀಲರ ಪರವಾಗಿ ಎಂ ವಿ ಜೆ ವಕೀಲರಿಂದಃ-

1 ನೇ ಆರೋಪಿ ಸೊಣ್ಣಪ್ಪ ಅಣ್ಣ ಹಾಗೂ ರಾಮಚಂದ್ರಪ್ಪ ತಮ್ಮ ಎಂದರೆ ಸರಿ. ನಿಮ್ಮ ಆಸ್ತಿ ಹಾಗೂ ಆರೋಪಿತರು ಆಸ್ತಿ ಬೇರೆ ಬೇರೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿರುತ್ತದೆ. ನಿಚ್ಚನಕುಂಟೆ ಗ್ರಾಮದ ಸರ್ವೆ ನಂ 34. ಆಸ್ತಿಯು 1 ನೇ ಆರೋಪಿಗೆ ಸೇರಿದ್ದು ಎಂದರೆ ಅಸಲು ದಾವೆ ನಂ 100/2011 ರಂತೆ ದಾವೆ ಚಾಲ್ತಿಯಲ್ಲಿರುತ್ತದೆ. ಗಲಾಟೆಯಲ್ಲಿ 1 ನೇ ಆರೋಪಿ ಮೃತ 2 ನೇ ಆರೋಪಿ ಹಾಗೂ 3 ನೇ ಆರೋಪಿ ಮತ್ತು ಇತರರು ಇದ್ದು ಅವರು ನನ್ನ ಮೇಲೆ ಕೈ ಮಾಡಿ ಪ್ರಾಣ ಬೆದರಿಕೆ ಹಾಕಿರುತ್ತಾರೆ. ಆ ದಿನ ನೀಲಗಿರಿ ತೋಪನ್ನು ಕಟಾವು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ 34 ಹಾಗೂ ಇತರ ಆಸ್ತಿಗಳ ಸಂಬಂಧ ನನಗೂ ಹಾಗೂ ಇತರ ವ್ಯಾಜ್ಯ ಇದೆ ಎಂದರೆ ಸರಿ. ಸರ್ವೆ ನಂ 34 ರ , 1 ನೇ ಆರೋಪಿಗೆ ಸೇರಿದ್ದು ನನ್ನ ಆರೋಪಿಗಳ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಗಳ ನಡುವೆ ಯಾವುದೇ ಗಲಾಟೆ ಆಗಿಲ್ಲದಿದ್ದರೂ ದುರುದ್ದೇಶದಿಂದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

(**ಹರೀಶ್ ಜಿ** )

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**